# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3

ಸಂಖ್ಯೆ:ವಿ1/ವಿಸಪ/ಅಧಿಸೂಚನೆ/2/2012-13 ದಿನಾಂಕ 25-07-2012

## ಅ ಧಿ ಸೂ ಚ ನೆ

ವಿಷಯ:-2012ನೇ ಸಾಲಿನ ಅಕ್ಟೋಬರ್/ನವೆಂಬರ್ ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ, ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಅದೇಶ ಸಂಖ್ಯೆ:ಇಡಿ 299, ಎಸ್.ಎಲ್.ಬಿ.
ದಿನಾಂಕ : 07-07-2012

-0-0-0-

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ನೋಂದಾಯಿಸಿಕೊಂಡು ಶಾಲಾ/ಸಂಸ್ಥೆಯ ಸಂಕೇತ ಹೊಂದಿರುವ ಸಂಗೀತ, ನೃತ್ಯ ತಾಳವಾದ್ಯ ಶಾಲೆಗಳಿಂದ ಮಂಡಳಿಯು ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳ ಮೂಲಕ ಅಕ್ಟೋಬರ್/ನವೆಂಬರ್ 2012ನೇ ಸಾಲಿನಲ್ಲಿ ನಡೆಸಲಿರುವ ಶಾಸ್ತ್ರೀಯ ಸಂಗೀತ (ಕರ್ನಾಟಕ/ಹಿಂದೂಸ್ತಾನಿ), ಭರತನಾಟ್ಯ/ಕೂಚುಪುಡಿ/ಕಥಕ್ಕಳಿ/ಕಥಕ್ ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ತಾನಿ) ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ, ನಿಗದಿತ ಪರೀಕ್ಷಾ ಶುಲ್ಕ ಮುಂತಾದ ವಿವರಗಳನ್ನು ಈ ಅಧಿಸೂಚನೆಯಲ್ಲಿ ನೀಡಲಾದ ನಿಯಮಗಳನ್ವಯ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

1. ನವೆಂಬರ್ 2012ರಲ್ಲಿ ನಡೆಯಲಿರುವ ಕಿರಿಯ ಮತ್ತು ಹಿರಿಯ ದರ್ಜೆ ಮತ್ತು ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ಸಂಗೀತ, ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳನ್ನು ಪರಿಷ್ಕೃತ ಪಠ್ಯಕ್ರಮದಂತೆ ನಡೆಸಲಾಗುವುದು. ಈ ಹಿಂದೆ ಅನುತ್ತೀರ್ಣರಾದ ಅಭ್ಯರ್ಥಿಗಳು ಮತ್ತೆ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ಅಕ್ಟೋಬರ್/ನವೆಂಬರ್ 2012ರಲ್ಲಿ ನಡೆಯಲಿರುವ ಪರೀಕ್ಷೆಯಲ್ಲಿ ಎಲ್ಲಾ ಪತ್ರಿಕೆಗಳಿಗೆ ಪರೀಕ್ಷೆ ತೆಗೆದುಕೊಳ್ಳುವುದು ಕಡ್ಡಾಯವಾಗುತ್ತದೆ.

2. ಪರೀಕ್ಷಾ ಕೇಂದ್ರ ನಿಗಧಿಗೆ ಸಾಕಷ್ಟು ಅಭ್ಯರ್ಥಿಗಳು ಇಲ್ಲದೇ ಇದ್ದರೆ ಅಥವಾ ಯಾವುದೇ ಕಾರಣಕ್ಕೆ ಆಗಲೀ, ರಾಜ್ಯದ ಯಾವ ಪರೀಕ್ಷಾ ಕೇಂದ್ರವನ್ನಾದರೂ ರದ್ದುಪಡಿಸಲು ಮಂಡಳಿಯು ಪೂರ್ಣ ಅಧಿಕಾರವನ್ನು ಹೊಂದಿದೆ. ಅಂತಹ ಕೇಂದ್ರಗಳಿಗೆ ನೊಂದಾಯಿಸಲ್ಪಡುವ ಅಭ್ಯರ್ಥಿಗಳನ್ನು ಹತ್ತಿರದ ಕೇಂದ್ರಗಳಿಗೆ ವರ್ಗಾಯಿಸಲಾಗುವುದು.

3. ನೋಂದಾಯಿತ ಶಾಲಾ/ಸಂಸ್ಥೆಗಳಿಂದ ಬ್ಯಾಂಕ್ ಹುಂಡಿಯೊಂದಿಗೆ ನಿಗದಿತ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಅರ್ಜಿಗಳೊಂದಿಗೆ ದಾಖಲೆಗಳನ್ನು ಸಲ್ಲಿಸಲು ಕೊನೆ ದಿನಾಂಕಗಳನ್ನು ಕೆಳಕಂಡಂತೆ ಗೊತ್ತುಪಡಿಸಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 21.08.2012 ಆಗಿರುತ್ತದೆ. ತದನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೆ ಮಾನ್ಯ ಮಾಡುವುದಿಲ್ಲ.

| | |
|---|---|
| ಪರೀಕ್ಷಾ ಕೇಂದ್ರಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | **21.08.2012** |
| ಪರೀಕ್ಷಾ ಕೇಂದ್ರದವರು ಬ್ಯಾಂಕ್ ಹುಂಡಿಯ ಸಹಿತ ಅರ್ಜಿಗಳನ್ನು ಮಂಡಳಿಗೆ ರವಾನಿಸುವ ಕೊನೆಯ ದಿನಾಂಕ | **25.08.2012** |

4. ನೋಂದಾಯಿತ ಸಂಗೀತ ಶಾಲಾ / ಸಂಸ್ಥೆಗಳು ಅಭ್ಯರ್ಥಿಗಳಿಂದ ವಸೂಲಿ ಮಾಡಿದ **ಪರೀಕ್ಷಾ ಶುಲ್ಕವನ್ನು ಸಂಗೀತ, ನೃತ್ಯ ಹಾಗೂ ತಾಳವಾದ್ಯಕ್ಕೆ ನಿಗದಿಪಡಿಸಿದ ಕೇಂದ್ರದಲ್ಲಿ ಪರೀಕ್ಷೆ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬ್ಯಾಂಕ್ ಹುಂಡಿಯನ್ನು ಮಂಡಳಿಯ Secretary, K.S.E.E.B, Bangalore.** ಇವರ ಪದನಾಮಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಹಾಗೂ ತುಂಬಿದ ಓ.ಎಮ್.ಆರ್ ಅರ್ಜಿಗಳನ್ನು ಹುಂಡಿಯ ಸಮೇತ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ನಿಗದಿತ ಪರೀಕ್ಷಾ ಕೇಂದ್ರಕ್ಕೆ ನೀಡಿ ಸ್ವೀಕೃತಿ ಪಡೆಯುವುದು.

ನಿಗದಿತ ದಿನಾಂಕದೊಳಗೆ ಶಾಲಾ ಮುಖ್ಯಸ್ಥರು ಅರ್ಜಿಗಳನ್ನು ತಪ್ಪದೇ **ಪರೀಕ್ಷಾ ಕೇಂದ್ರಕ್ಕೆ** ತಲುಪಿಸಬೇಕು. ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಸದರಿ ಅರ್ಜಿಗಳನ್ನು ಮಂಡಳಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು. ತಡವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಪರೀಕ್ಷಾ ಶುಲ್ಕದ ವಿವರ**

ನಿಮ್ಮ ಶಾಲಾ/ಸಂಸ್ಥೆಯಿಂದ ಜೂನಿಯರ್/ಸೀನಿಯರ್ ಮತ್ತು ವಿದ್ವತ್ ಪೂರ್ವ/ವಿದ್ವತ್ ಅಂತಿಮ ಪರೀಕ್ಷೆಗೆ ಕುಳಿತ ಒಟ್ಟು ಅಭ್ಯರ್ಥಿಗಳ ಶುಲ್ಕವನ್ನು ಸಂಗ್ರಹಿಸಿ ಒಟ್ಟು ಪರೀಕ್ಷಾ ಶುಲ್ಕದ ಮೊತ್ತದ **ಒಂದೇ ಬ್ಯಾಂಕ್ ಡಿ.ಡಿ. ಪಡೆದು ಸಲ್ಲಿಸಿ.** ಪರೀಕ್ಷಾ ಶುಲ್ಕ ಕಡ್ಡಾಯವಾಗಿ ಈ ಕೆಳಕಂಡಂತಿರಬೇಕು.

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ಪರೀಕ್ಷಾ ಶುಲ್ಕ ರೂ. | ಫಲಿತಾಂಶ ತಿಳಿಸುವ ಶುಲ್ಕ ರೂ. | ಒಟ್ಟು ಶುಲ್ಕ ರೂ. |
|---|---|---|---|---|
| 1 | ಕಿರಿಯ ದರ್ಜೆ (Junior) | **500-00** | **10-00** | **510=00** |
| 2 | ಹಿರಿಯ ದರ್ಜೆ (Senior) | **600-00** | **10-00** | **610=00** |
| 3 | ವಿದ್ವತ್ ಪೂರ್ವ (Pre Vidwat) | **700-00** | **10-00** | **710=00** |
| 4 | ವಿದ್ವತ್ ಅಂತಿಮ (Vidwat Final) | **750-00** | **10-00** | **760=00** |

- ಶಾಲಾ/ಸಂಸ್ಥೆಯ ಮುಖ್ಯಸ್ಥರು ಅರ್ಜಿ ಶುಲ್ಕ ರೂ. 20.00ನ್ನು ನಗದು ರೂಪದಲ್ಲಿ ಪರೀಕ್ಷಾ ಕೇಂದ್ರದಲ್ಲಿ ಪಾವತಿಸಿ ಅರ್ಜಿಗಳನ್ನು ಪಡೆಯಬಹುದು.
- ಎಸ್ ಸಿ/ಎಸ್ ಟಿ ಮತ್ತು ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಮಾತ್ರ ವಿನಾಯಿತಿ ಇರುತ್ತದೆ. ಅರ್ಜಿ ಶುಲ್ಕ ಮತ್ತು ಫಲಿತಾಂಶ ತಿಳಿಸುವ ಶುಲ್ಕ ರೂ. 30.00ನ್ನು ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ.

5. ಪರೀಕ್ಷಾ ಕೇಂದ್ರವರು ನಿಮ್ಮ ಕೇಂದ್ರಕ್ಕೆ ಪರೀಕ್ಷೆ ಕಟ್ಟಲು ಬರುವ ಅಭ್ಯರ್ಥಿಗಳಿಗೆ, ಒಂದು ಅರ್ಜಿಗೆ 20=00ಗಳಂತೆ ನಗದಾಗಿ ಪಡೆದುಕೊಳ್ಳುವುದು. ಅರ್ಜಿಶುಲ್ಕವನ್ನು 20=00 ರೂ ಗಳಲ್ಲಿ 8=00 ರೂ ಅಂಚೆ ವೆಚ್ಚ ಮತ್ತು ಈ ಕೆಲಸ ಮಾಡುವ ಸಿಬ್ಬಂದಿಯ ಸಂಭಾವನೆಗೆ ಉಪಯೋಗಿಸುವುದು. ಬಾಕಿ 12=00ಗಳನ್ನು ನಿಮ್ಮ ಪರೀಕ್ಷಾ ಕೇಂದ್ರದಲ್ಲಿ ಅರ್ಜಿ ತೆಗೆದುಕೊಂಡ ಅಭ್ಯರ್ಥಿಗಳ ಸಂಖ್ಯೆಗನುಗಣವಾಗಿ Secretary, K.S.E.E.B, Bangalore. ಈ ಪದನಾಮಕ್ಕೆ ಬ್ಯಾಂಕ್ ಹುಂಡಿ ಪಡೆದು ಕಳುಹಿಸುವುದು. ಒಮ್ಮೆ ಪಾವತಿಸಿದ ಹಣವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡುವುದಿಲ್ಲ.

6. ಓ.ಎಂ.ಆರ್. ಅರ್ಜಿಗಳನ್ನು ಸ್ಕ್ಯಾನಿಂಗ್ ಮಾಡುವುದರಿಂದ ಅರ್ಜಿಗಳನ್ನು **ಆಂಗ್ಲ ಭಾಷೆಯಲ್ಲಿ ದೊಡ್ಡ ಅಕ್ಷರದಲ್ಲಿ(CAPITAL LETTERS)** ತುಂಬಿ ಶೇಡ್ ಮಾಡಬೇಕು. ಯಾವುದೇ ಕಾರಣಕ್ಕೂ ಅರ್ಜಿಗಳನ್ನು ಮಡಚಬಾರದು, ಸ್ಟೇಪ್ಲರ್ ಪಿನ್, ಗುಂಡು ಪಿನ್ ಬಳಸಬಾರದು. ಓ.ಎಂ.ಆರ್. ಅರ್ಜಿಗಳನ್ನು ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬಬೇಕು. ಸಂಸ್ಥೆಯ ಅಭ್ಯರ್ಥಿಗಳಿಗೆ ಸಂಬಂಧಿಸಿದ ವ್ಯಾಸಂಗ ಪ್ರಮಾಣ ಪತ್ರ (STUDY CERTIFICATE), ಅಂಕಪಟ್ಟಿಗಳನ್ನು ಕ್ರಮವಾಗಿ ಜೋಡಿಸಿ ಪಿನ್ ಮಾಡಿ ಓ.ಎಂ.ಆರ್. ಶೀಟುಗಳೊಂದಿಗೆ ಪ್ರತ್ಯೇಕವಾಗಿ ಇಡಬೇಕು.

7. ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ಅರ್ಜಿಗಳನ್ನು ನೇರವಾಗಿ ಪರೀಕ್ಷಾ ಮಂಡಳಿಗೆ ಸಲ್ಲಿಸಬಾರದು. ಹಾಗೆಯೇ ಪರೀಕ್ಷಾ ಮಂಡಳಿಯಲ್ಲಿ ನೊಂದಾಯಿಸದೇ ಇರುವ ಸಂಸ್ಥೆಗಳ ಮುಖಾಂತರ ಬರುವ ಅರ್ಜಿಗಳನ್ನು ಸಹ ತಿರಸ್ಕರಿಸಲಾಗುವುದು. ಮಂಡಳಿಯಲ್ಲಿ ನೋಂದಾಯಿಸಿ ಕೊಂಡಿರುವ ಶಾಲಾ/ಸಂಸ್ಥೆಯಿಂದ ಮಾತ್ರ ಪರೀಕ್ಷಾ ಕೇಂದ್ರಗಳ ಮುಖಾಂತರ ಅರ್ಜಿಗಳನ್ನು ಸ್ವೀಕರಿಸಲಾಗುವುದು. ನೋಂದಾಯಿಸಲ್ಪಡದೇ ಇರುವ ಶಾಲಾ/ಸಂಸ್ಥೆಯಿಂದ ಅರ್ಜಿಗಳು ಬಂದಲ್ಲಿ ಏಕಪಕ್ಷೀಯವಾಗಿ ತಿರಸ್ಕರಿಸಲಾಗುವುದು. **ಎಲ್ಲಾ ಅರ್ಜಿಗಳಲ್ಲಿ ಶಾಲಾ/ಸಂಸ್ಥೆಯ ಸಂಕೇತ ಕಡ್ಡಾಯವಾಗಿ ನಮೂದಿಸಬೇಕು.**

8. <u>ಪರಿಷ್ಕೃತ ಪಠ್ಯ ಕ್ರಮದಂತೆ ಒಂದು ವರ್ಷದಲ್ಲಿ ಅಭ್ಯರ್ಥಿಯು ಒಂದು ವಿಷಯದಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ.</u>

9. ಪಠ್ಯಕ್ರಮದಂತೆ ಅಭ್ಯರ್ಥಿಗಳು ಯಾವುದೇ ಒಂದು ದರ್ಜೆಯ (ಗ್ರೇಡ್) ಹಾಡುಗಾರಿಕೆ ಮತ್ತು ವಾದ್ಯ ಸಂಗೀತ ಪರೀಕ್ಷೆಗಳಿಗೆ ಒಂದು ಬಾರಿಗೆ ಕುಳಿತುಕೊಳ್ಳಬಹುದು. ಆದರೆ ಈ ಎರಡು ಭಾಗಕ್ಕೆ ಬೇರೆ ಬೇರೆ ಅರ್ಜಿಯನ್ನು ಪರೀಕ್ಷಾ ಶುಲ್ಕದೊಡನೆ ಕಟ್ಟಿರಬೇಕು. ಯಾವ ಕಾರಣದಿಂದಲೂ ಒಬ್ಬ ಅಭ್ಯರ್ಥಿಯು ಬೇರೆ ಬೇರೆ ದರ್ಜೆಯ (ಗ್ರೇಡ್) ಹಾಡುಗಾರಿಕೆ ಹಾಗೂ ವಾದ್ಯ ಸಂಗೀತ ಪರೀಕ್ಷೆಗಳಿಗೆ ಒಂದೇ ವರ್ಷದಲ್ಲಿ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತೆಯೇ ಹಾಡುಗಾರಿಕೆ ಅಥವಾ ವಾದ್ಯ ಸಂಗೀತದ ಪರೀಕ್ಷೆಯೊಂದಿಗೆ ತಾಳವಾದ್ಯ ಮತ್ತು ನೃತ್ಯದ ಪರೀಕ್ಷೆಗಳಿಗೆ ಜೊತೆಯಲ್ಲಿಯೇ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

10. ವಿವಿಧ ಪರೀಕ್ಷೆಗಳಿಗೆ ಕೆಳಕಂಡ ವಾದ್ಯಗಳನ್ನು ಮಾತ್ರ ನಿಗದಿಪಡಿಸಿದೆ.

| | |
|---|---|
| **ಅ) ಕರ್ನಾಟಕ ವಾದ್ಯ ಸಂಗೀತ** | **ವೀಣೆ/ಪಿಟೀಲು/ಕೊಳಲು/ನಾದಸ್ವರ/ಗೋಟುವಾದ್ಯ/ ಕ್ಲಾರಿಯೋನೇಟ್/ಮ್ಯಾಂಡಲಿನ್/ಸ್ಯಾಕ್ಸ್‌ಫೋನ್** |
| **ಆ) ಹಿಂದೂಸ್ತಾನಿ ವಾದ್ಯ ಸಂಗೀತ** | **ಪಿಟೀಲು/ಕೊಳಲು/ಬೀನ್/ಸಿತಾರ್/ಷಹನಾಯ್/ ದಿಲ್‌ರುಬಾ/ಹಾರ್ಮೋನಿಯಂ/ಮೋಹನ್ ವೀಣಾ/ ರುದ್ರವೀಣಾ/ಸಂತೂರ್/ಸರೋದ್/ಸಾರಂಗಿ** |
| **ಇ) ಕರ್ನಾಟಕ ತಾಳವಾದ್ಯ** | **ಮೃದಂಗ/ಖಂಜಿರ/ಘಟಂ/ಮೋರ್ಚಿಂಗ್/ಡೋಲ್/ಡೋಲಕ್** |
| **ಈ) ಹಿಂದೂಸ್ತಾನಿ ತಾಳವಾದ್ಯ** | **ತಬಲ/ಪಕ್ವಾಜ್/ಡೋಲಕ್** |

11. ಪರಿಷ್ಕೃತ ಪಠ್ಯಕ್ರಮ ಕಿರಿಯ ದರ್ಜೆ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ 01–03–2012ಕ್ಕೆ 10 ವರ್ಷ ತುಂಬಿರಬೇಕು. ಶಾಲಾ ಮುಖ್ಯಸ್ಥರಿಂದ ಪಡೆದ ಮೂಲ ದಾಖಲೆ ಪತ್ರ/ ವರ್ಗಾವಣೆ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿ/ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಮಾಣ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಲಗತ್ತಿಸಲು ತಿಳಿಸಿದೆ. ಕನಿಷ್ಠ ಕನ್ನಡ ನಾಲ್ಕನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು. ಅಥವಾ ಅಭ್ಯರ್ಥಿಯು ಕನ್ನಡದಲ್ಲಿ ವ್ಯವಹರಿಸಲು ನೈಪುಣ್ಯತೆ ಪಡೆದಿರುವ ಬಗ್ಗೆ ಸಕ್ಷಮ ಅಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದು ಅರ್ಜಿಯ ಜೊತೆಗೆ ಲಗತ್ತಿಸಬೇಕು.

12. ಪರಿಷ್ಕೃತ ಪಠ್ಯದ ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು, ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷ ಆಗಿರಬೇಕು. ಅಥವಾ 01–03–2012ಕ್ಕೆ ಸರಿಯಾಗಿ 17ವರ್ಷ ತುಂಬಿದ್ದು, ಅಭ್ಯರ್ಥಿಯು ಸಂಗೀತ/ ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ (ಪಿ.ಯು.ಸಿ) ಪದವಿ ಪೂರ್ವ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆಗೆ ಕೂಡಲು ಅವಕಾಶವಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ–195–ಡಿಜಿಒ–2004 ಬೆಂಗಳೂರು, ದಿನಾಂಕ 30–11–2012ಕ್ಕೆ 18 ವರ್ಷ ಪೂರ್ಣಗೊಂಡ ಅಭ್ಯರ್ಥಿಗಳು ನೇರವಾಗಿ ಹಿರಿಯ ದರ್ಜೆ ಸಂಗೀತ/ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆ ತೆಗೆದುಕೊಳ್ಳಬಹುದು. ಸದರಿ ಅಭ್ಯರ್ಥಿಗಳು ಪಾಠ ಮಾಡಿರುವ ಗುರುಗಳಿಂದ ಪರೀಕ್ಷೆಗೆ ನಿಗದಿಪಡಿಸಿದ ಪಠ್ಯ ವಸ್ತುವಿನ ಪಾಠ ಆಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಅರ್ಜಿ ಜೊತೆಗೆ ಲಗತ್ತಿಸಬೇಕು.

ವಿದ್ವತ್ ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳಾಗಿರಬೇಕು ಮತ್ತು ದಿನಾಂಕ 01–03–2012ಕ್ಕೆ ಸರಿಯಾಗಿ 17ವರ್ಷ ತುಂಬಿರಬೇಕು. ದಿನಾಂಕ 01–03–2012ಕ್ಕೆ 19ವರ್ಷ ಪೂರ್ಣಗೊಂಡಿರುವ ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ವಿದ್ವತ್ ಪರೀಕ್ಷೆಗೆ ಕೂಡಬಹುದು. ವಿದ್ವತ್ ಪೂರ್ವ ಪರೀಕ್ಷೆ ಉತ್ತೀರ್ಣರಾದ ಒಂದು ವರ್ಷದ ನಂತರ ವಿದ್ವತ್ ಅಂತಿಮ ಪರೀಕ್ಷೆಗೆ ಕೂಡಬಹುದು. **<u>ಅಭ್ಯರ್ಥಿಗಳು ಹಿರಿಯ ಮತ್ತು ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ದರ್ಜೆ ಪರೀಕ್ಷೆಗಳಿಗೆ ಕಳುಹಿಸುವ ಅರ್ಜಿಗಳ ಜೊತೆಯಲ್ಲಿ ಹಿಂದಿನ ಅಂದರೆ ಕಿರಿಯ ಮತ್ತು ಹಿರಿಯ ದರ್ಜೆಯ ಹಾಗೂ ವಿದ್ವತ್ ಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ/ಪ್ರಮಾಣ ಪತ್ರಗಳ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಬೇಕು.</u>**

13. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇದೆ. ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲು ಈ ವರ್ಗದ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಮೂಲಪ್ರಮಾಣ ಪತ್ರಗಳನ್ನು ಅರ್ಜಿಗಳ ಜೊತೆಗೆ ಲಗತ್ತಿಸಬೇಕು. ಹಾಗೆಯೇ ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ಅಂಧ ವಿದ್ಯಾರ್ಥಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಮೂಲ ಪ್ರಮಾಣಪತ್ರಗಳನ್ನು ಅರ್ಜಿಯ ಜೊತೆಯಲ್ಲಿ ಲಗತ್ತಿಸಬೇಕು. ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

14. ನೋಂದಾಯಿತ ಸಂಸ್ಥೆಯ ಮುಖ್ಯಸ್ಥರು ಅರ್ಜಿಯನ್ನು ಪರೀಕ್ಷಾ ಕೇಂದ್ರಕ್ಕೆ ನೀಡುವ ಮುನ್ನ ಈ ಕೆಳಕಂಡ ಸೂಚನೆಗಳನ್ನು ತಪ್ಪದೆ ಎಚ್ಚರವಹಿಸಿ ಪಾಲಿಸತಕ್ಕದ್ದು.

ಅ) ಶಾಲೆಯ ಮುಖ್ಯಸ್ಥರು, ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆ ನಡೆಸಲು ನಿಗದಿಪಡಿಸಿರುವ ವಿಷಯಗಳಿಗೆ ಮಾತ್ರ ಅರ್ಜಿಗಳನ್ನು ಸ್ವೀಕರಿಸಿ ಸಲ್ಲಿಸಬೇಕು. ಒಂದು ವೇಳೆ ಬೇರೆ ವಿಷಯಗಳಿಗೆ ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಮುಂದಿನ ಆಗುಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು. ಒಂದು ವೇಳೆ ಯಾವುದಾದರೂ ವಿದ್ಯಾರ್ಥಿ ಆ ಜಿಲ್ಲೆಯ ಪರೀಕ್ಷಾ ಕೇಂದ್ರಕ್ಕೆ ನಿಗದಿಪಡಿಸಿದ ವಿಷಯವಲ್ಲದೇ ಬೇರೆ ವಿಷಯವನ್ನು ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸಿದಲ್ಲಿ ಮಂಡಳಿಯ ವೆಬ್ ಸೈಟ್ ನೋಡಿ ವಿದ್ಯಾರ್ಥಿ ಬಯಸುವ ವಿಷಯ ಇರುವ ಜಿಲ್ಲೆಯಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಮಂಡಳಿಯ ವೆಬ್‌ಸೈಟ್ ಕಡ್ಡಾಯವಾಗಿ ವೀಕ್ಷಿಸಿ ವಿದ್ಯಾರ್ಥಿ ಇಚ್ಛಿಸಿದ ಜಿಲ್ಲೆಗೆ ಅರ್ಜಿ ಸಲ್ಲಿಸಬಹುದು.

ಆ) ಅರ್ಜಿಗಳನ್ನು ವಿಷಯ ಮತ್ತು ದರ್ಜೆಗೆ ಅನುಸಾರವಾಗಿ ಜೋಡಿಸಿ, ಕಿರಿಯ ದರ್ಜೆ, ಹಿರಿಯ ದರ್ಜೆ, ವಿದ್ವತ್ ಪೂರ್ವ ಮತ್ತು ವಿದ್ವತ್ ಅಂತಿಮ (ಪರಿಷ್ಕೃತ ಪಠ್ಯ) ಬೇರೆ ಬೇರೆಯಾಗಿ ಹಾಡುಗಾರಿಕೆ, ಆಮೇಲೆ ತಾಳವಾದ್ಯ ನಂತರ ನೃತ್ಯ ಹೀಗೆ ಅನುಕ್ರಮವಾಗಿ ಜೋಡಿಸಿ ಕೊಡುವುದು.

15. ಮಂಡಳಿಯಿಂದ ಹೊಸದಾಗಿ ಶಾಲಾ ಸಂಕೇತ ನೀಡಿದ ಜ್ಞಾಪನದ ಜೆರಾಕ್ಸ್ ಪ್ರತಿ ಕಡ್ಡಾಯವಾಗಿ ಲಗತ್ತಿಸಿ ಅರ್ಜಿಗಳೊಂದಿಗೆ ಸಲ್ಲಿಸುವುದು. ಅಭ್ಯರ್ಥಿಯ ಇತ್ತೀಚಿನ ಅಂದರೆ 3 ತಿಂಗಳೊಳಗೆ ತೆಗೆಸಿದ 2 ಭಾವಚಿತ್ರಗಳನ್ನು ಒ.ಎಂ.ಆರ್. ಅರ್ಜಿಯಲ್ಲಿ ತಪ್ಪದೇ ಅಂಟಿಸಿ. 2 ಭಾವಚಿತ್ರಗಳನ್ನು ಕೇಂದ್ರಕ್ಕೆ ನೀಡುವುದು.
ಪರೀಕ್ಷಾ ಕೇಂದ್ರದವರು ಸಂಸ್ಥೆಯವರು ನೀಡಿದ 2 ಭಾವಚಿತ್ರಗಳನ್ನು ಕೇಂದ್ರದಲ್ಲೇ ಉಳಿಸಿಕೊಳ್ಳುವುದು. ಅದರಲ್ಲಿ ಒಂದು ಭಾವಚಿತ್ರವನ್ನು ಎ4 ಸೈಜ್ ಹಾಳೆಯ ಮೇಲೆ ಅಂಟಿಸಿ ಅಭ್ಯರ್ಥಿಯ ವಿವರ ಬರೆದು ಪುಸ್ತಕದಂತೆ ಸಿದ್ಧಪಡಿಸಿ ಕೇಂದ್ರದಲ್ಲಿ ಕಾಯ್ದಿರಿಸಿಕೊಳ್ಳುವುದು. ಇನ್ನೊಂದು ಭಾವಚಿತ್ರವನ್ನು ಪರೀಕ್ಷಾ ಕಾರ್ಯದ ಅಗತ್ಯಕ್ಕೆ ಅನುಗುಣವಾಗಿ ಬಳಸಿಕೊಳ್ಳುವುದು.

16. ಶಾಲೆಯ ಮುಖ್ಯಸ್ಥರು ನೋಂದಾಯಿಸಿ ಸಂಸ್ಥೆಗಳಿಂದ ಕಳುಹಿಸಿದ ಅಭ್ಯರ್ಥಿಗಳ ಸಂಪೂರ್ಣ ವಿವರ ಅಂದರೆ, ಅಭ್ಯರ್ಥಿಯ **ಹೆಸರು/ತಂದೆಯ ಹೆಸರು/ಜನ್ಮ** ದಿನಾಂಕ/ಪೂರ್ಣ ಅಂಚೆ ವಿಳಾಸ, ತೆಗೆದುಕೊಂಡಿರುವ ಪರೀಕ್ಷೆ ಮತ್ತು ದೂರವಾಣಿ ಸಂಖ್ಯೆ ಎಲ್ಲಾ ವಿವರಗಳನ್ನು ಒಂದು ದೊಡ್ಡ ನೊಂದಣಿ ಪುಸ್ತಕದಲ್ಲಿ ತಪ್ಪದೆ ನಮೂದಿಸಿಕೊಳ್ಳುವುದು.

17. ಹೊಸ ಪಠ್ಯ ಕ್ರಮದಲ್ಲಿ ಮೊದಲು ಪ್ರಾಯೋಗಿಕ ಪರೀಕ್ಷೆ ಪಾಸು ಮಾಡಿ ನಂತರದ ವರ್ಷದಲ್ಲಿ ಶಾಸ್ತ್ರ ಪರೀಕ್ಷೆಗೆ ಕುಳಿತು ಪಾಸು ಮಾಡಲು ಅವಕಾಶವಿರುವುದಿಲ್ಲ. ಅಂತಹ ಅರ್ಜಿಗಳನ್ನು ಶಾಲಾ ಹಂತದಲ್ಲಿಯೇ ತಿರಸ್ಕರಿಸಲು ತಿಳಿಸಿದೆ.

18. ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲಿ ಮಂಡಳಿಯಿಂದ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರದ ವಿಳಾಸದಲ್ಲಿ ಅಭ್ಯರ್ಥಿಗಳು ಶಾಸ್ತ್ರ ಪರೀಕ್ಷೆಗೆ ಹಾಗೂ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗತಕ್ಕದ್ದು.

ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಶಾಲೆಯ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದೇ ಆಗುವ ತೊಂದರೆಗಳಿಗೆ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

**ವಿದ್ಯಾರ್ಥಿಗಳಿಗೆ ಸೂಚನೆ :**

1. ಹಾಡುಗಾರಿಕೆಯ ವಿದ್ಯಾರ್ಥಿಗಳು ಎಲೆಕ್ಟ್ರಾನಿಕ್ ತಂಬೂರಕ್ಕೆ ಬೇಕಾಗುವ ಸೆಲ್ಲನ್ನು ತಂದಿರಬೇಕು.
2. ವಿದ್ವತ್ ದರ್ಜೆಯ ವಿದ್ಯಾರ್ಥಿಗಳು ಎಲೆಕ್ಟ್ರಾನಿಕ್ ತಂಬೂರವನ್ನು ಖಡ್ಡಾಯವಾಗಿ ಬಳಸುವಂತಿಲ್ಲ.
3. ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಪರೀಕ್ಷಕರೊಂದಿಗೆ ಮಾತನಾಡುವಂತಿಲ್ಲ.
4. ವಿದ್ಯಾರ್ಥಿಗಳು ಪರೀಕ್ಷಕರ ಮೇಲೆ ಅನಾವಶ್ಯಕವಾಗಿ ಆರೋಪ ಹೊರಿಸುವುದು ಕಂಡು ಬಂದಲ್ಲಿ ಅಂತಹ ವಿದ್ಯಾರ್ಥಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು.
5. ಪರೀಕ್ಷಕರ ತೀರ್ಮಾನವೇ ಅಂತಿಮ ತೀರ್ಮಾನ.
6. ವಿದ್ಯಾರ್ಥಿಗಳು ಪರೀಕ್ಷೆಯ ಕೊಠಡಿಯಲ್ಲಿ ಮೊಬೈಲ್ ಬಳಸುವುದನ್ನು ಖಡ್ಡಾಯವಾಗಿ ನಿಷೇಧಿಸಲಾಗಿದೆ.
7. ವಿದ್ವತ್ ದರ್ಜೆಯ ತಾಳವಾದ್ಯದ ಅಭ್ಯರ್ಥಿಗಳು ಹಾಡುಗಾರರನ್ನು ಕರೆದುಕೊಂಡು ಬರತಕ್ಕದ್ದು, ಆ ಹಾಡುಗಾರರು ಸಂಬಂಧಿಗಳು, ಗುರುಗಳು ಅಥವಾ ಆ ವರ್ಷದ ಸಂಗೀತದ ಪರೀಕ್ಷೆಯ ಅಭ್ಯರ್ಥಿಯಾಗಲೀ ಆಗಿರಕೂಡದು.
8. ಶಾಸ್ತ್ರ ವಿಭಾಗ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸಲು ಅಂಧ ವಿದ್ಯಾರ್ಥಿಗಳು ಬರವಣಿಗೆಗಾಗಿ ಇನ್ನೊಬ್ಬರ ಸಹಾಯವನ್ನು ಪಡೆಯಬಹುದಾಗಿದೆ. ಆದರೆ ಅವರು ಆ ಪರೀಕ್ಷೆಯ ಅಭ್ಯರ್ಥಿಯಾಗಿರಬಾರದು.
9. ಯಾವುದೇ ರೀತಿಯ ಧ್ವನಿ ಮುದ್ರಣಕ್ಕೆ (ರೆಕಾರ್ಡಿಂಗ್) ಅವಕಾಶವಿರುವುದಿಲ್ಲ.
10. **ಪರೀಕ್ಷಾ ಕೇಂದ್ರದ ಆವರಣದೊಳಗೆ ಪರೀಕ್ಷಾ ಅಭ್ಯರ್ಥಿಯ ಹೊರತು ಪೋಷಕರಿಗೆ ಪ್ರವೇಶ ನಿಷೇಧಿಸಲಾಗಿದೆ.**
11. ನೃತ್ಯ ಅಭ್ಯರ್ಥಿಗಳು ತಮ್ಮ ಸಹಾಯಕರನ್ನು ಮಾತ್ರ ತಮ್ಮೊಂದಿಗೆ ಕರೆತರತಕ್ಕದ್ದು.

**ವಿಶೇಷ ಸೂಚನೆಗಳು :**

1) ಹಲವಾರು ನೋಂದಾಯಿತ ಸಂಸ್ಥೆಗಳ ಅರ್ಹ ಶಿಕ್ಷಕರು ಇದುವರೆವಿಗೆ ಪರೀಕ್ಷಕರಾಗಿ ನೋಂದಾಯಿಸಿಕೊಳ್ಳದಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಈ ವರ್ಷ ಅಂತಹ ಶಿಕ್ಷಕರು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು, ಸಂಬಂಧಿಸಿದ ಅರ್ಜಿ ನಮೂನೆಯನ್ನು ಪರೀಕ್ಷಾ ಕೇಂದ್ರದಿಂದ ಪಡೆದು ಮಂಡಳಿಗೆ ಕಳಿಸತಕ್ಕದ್ದು. ಪರೀಕ್ಷಾ ಕೇಂದ್ರದವರು ಸಂಸ್ಥೆಗಳಿಗೆ ಖಾಲಿ ಅರ್ಜಿ ನೀಡುವಾಗ ಶಿಕ್ಷಕರ ನೋಂದಣಿ ನಮೂನೆಯನ್ನು ಸಹ ನೀಡಿ ಭರ್ತಿ ಮಾಡಿದ ಅಭ್ಯರ್ಥಿಗಳ ಅರ್ಜಿಗಳ ಜೊತೆ ಇದನ್ನು ಸಹ ಮಂಡಳಿಗೆ ರವಾನಿಸುವುದು.
2) ಮುಂಬರುವ ಪರೀಕ್ಷೆಗಳಿಗೆ ಈ ಹಿಂದಿನಂತೆ ಪರೀಕ್ಷಾ ಕೇಂದ್ರಗಳನ್ನು ಸಂಪರ್ಕಿಸಿ ಅರ್ಜಿಗಳನ್ನು ಪಡೆಯಲು ತಿಳಿಸಿದೆ. ಕೇಂದ್ರದಲ್ಲಿ ನಡೆಸತಕ್ಕ ಎಲ್ಲಾ ಪರೀಕ್ಷಾ ವ್ಯವಹಾರಗಳಿಗೆ ಸಂಸ್ಥೆಯ ಮೊಹರನ್ನು ಕಡ್ಡಾಯವಾಗಿ ತೆಗೆದುಕೊಂಡು ಹೋಗತಕ್ಕದ್ದು.
3) ಸಂಸ್ಥೆಯವರು ಪರೀಕ್ಷಾ ಕೇಂದ್ರಕ್ಕೆ ಸಲ್ಲಿಸುವ ಅರ್ಜಿಗಳು, ಬ್ಯಾಂಕ್ ಹುಂಡಿಗಳ ಜೆರಾಕ್ಸ್ ಪ್ರತಿಗಳನ್ನು ಇಟ್ಟುಕೊಳ್ಳುವುದು.
4) ಶಾಸ್ತ್ರ ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ತಾಳ್ಮೆಯಿಂದಿದ್ದು, ಶಾಂತಿಯುತವಾದ ವಾತಾವರಣವನ್ನು ಕಾಪಾಡಲು ಪೋಷಕರಿಗೆ ತಿಳಿಸುವುದು. ಪರೀಕ್ಷೆಗಳು ಸುಗಮವಾಗಿ ಸಕಾಲಕ್ಕೆ ನಡೆಯಲು ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಸಹಕಾರ ನೀಡುವುದು.
5) ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನವರಾದಲ್ಲಿ ಪೋಷಕರು/ಶಿಕ್ಷಕರು ತಪ್ಪಿಲ್ಲದಂತೆ ಓ.ಎಂ.ಆರ್ ಅರ್ಜಿಯಲ್ಲಿ ವಿವರಗಳನ್ನು ತುಂಬತಕ್ಕದ್ದು. ತಪ್ಪಾಗಿ ತುಂಬಿದಲ್ಲಿ ಮಂಡಳಿಯ ನಿಯಮಾನುಸಾರ ದಂಡ ವಿಧಿಸಲಾಗುವುದು. ಓ.ಎಂ.ಆರ್. ಅರ್ಜಿಯ ಜೆರಾಕ್ಸ್ ಪ್ರತಿಯಲ್ಲಿ ವಿದ್ಯಾರ್ಥಿಯ ವಿವರವನ್ನು ತುಂಬಿ ಸರಿಯಾಗಿದೆಯೆಂದು ಖಚಿತಪಡಿಸಿಕೊಂಡು ಆ ನಂತರ ಮೂಲ ಪ್ರತಿಯಲ್ಲಿ ವಿವರವನ್ನು ತುಂಬುವುದು. ತಪ್ಪಿದಲ್ಲಿ ಪೋಷಕರು/ಶಿಕ್ಷಕರು ಪೂರ್ಣ ಜವಾಬ್ದಾರರಾಗುತ್ತಾರೆ.
6) **ಅರ್ಜಿ ಪಡೆಯಲು ಬರುವ ಎಲ್ಲಾ ಸಂಸ್ಥೆಗಳಿಗೆ ಅವರ ಅಗತ್ಯಕ್ಕೆ ತಕ್ಕಂತೆ ಓ.ಎಂ.ಆರ್ ಅರ್ಜಿಗಳು ಮತ್ತು ನಾಮಿನಲ್ ರೋಲ್ ನೀಡುವುದು. ಸಂಸ್ಥೆಯವರು ಭರ್ತಿ ಮಾಡಿದ ನಾಮಾಂಕಿತ ಪಟ್ಟಿಯನ್ನು(ನಾಮಿನಲ್ ರೋಲ್) ದ್ವಿಪ್ರತಿಯಲ್ಲಿ ಜೆರಾಕ್ಸ್ ಮಾಡಿಸಿ ಒಂದನ್ನು ತಮ್ಮಲ್ಲಿ ಮತ್ತೊಂದನ್ನು ಪರೀಕ್ಷಾ ಕೇಂದ್ರಕ್ಕೆ ಸಲ್ಲಿಸುವುದು. ಮೂಲ ನಾಮಾಂಕಿತ ಪಟ್ಟಿಯನ್ನು (ನಾಮಿನಲ್ ರೋಲ್) ಪರೀಕ್ಷಾ ಕೇಂದ್ರದವರು ಮಂಡಳಿಗೆ ಸಲ್ಲಿಸುವುದು.**
7) ವಿದ್ಯಾರ್ಥಿಗಳ ನಾಮಪಟ್ಟಿ ಮತ್ತು ಓ.ಎಂ.ಆರ್ ಅರ್ಜಿಗಳನ್ನು ಸಂಸ್ಥೆಯವರು ಜೋಡಿಸಿ ಒಂದು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ಮಂಡಳಿಗೆ ಕಳುಹಿಸಲು ಸೂಚಿಸಿದೆ.
8) **ವಿದ್ಯಾರ್ಥಿಗಳು ಮತ್ತು ಶಾಲಾ/ಸಂಸ್ಥೆಯ ಮುಖ್ಯಸ್ಥರು ಶಾಲಾ ವೇಳೆಯಲ್ಲಿ ಮಾತ್ರ ಅರ್ಜಿಗಳನ್ನು ಪಡೆಯುವುದು ಮತ್ತು ಸಲ್ಲಿಸುವುದು.**
9) ಎಲ್ಲಾ ಪರೀಕ್ಷಾ ಕೇಂದ್ರದವರು ನಿಮ್ಮ ಕೇಂದ್ರಕ್ಕೆ ಬಂದಿರುವ ಸಂಸ್ಥೆಯ ಅರ್ಜಿಗಳು, ಬ್ಯಾಂಕ್ ಹುಂಡಿ ಇತ್ಯಾದಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮುಖಾಂತರ ಕಳುಹಿಸುವುದು.

ಶ್ರೀಮತಿ ಶ್ರೀವಲ್ಲಿ ಎನ್,
ಸಹಾಯಕ ನಿರ್ದೇಶಕರು
ಸಂಗೀತ ವಿಭಾಗ, 4ನೇ ಮಹಡಿ,
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
ಮಂಡಳಿಯ ದೂರವಾಣಿ ಸಂಖ್ಯೆಗಳು : 08023360108, 08023360109
ಫ್ಯಾಕ್ಸ್ ನಂಬರ್-08023311146

(ಡಿ.ವೆಂಕಟೇಶಯ್ಯ)
ನಿರ್ದೇಶಕರು (ಇತರೆ ಪರೀಕ್ಷೆಗಳು)

<u>ಇವರಿಗೆ</u>

1) ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮೈಸೂರು, ಬೆಳಗಾಂ, ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ.
2) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ (ಅಭಿವೃದ್ಧಿ) ರವರಿಗೆ ಮಾಹಿತಿಗಾಗಿ.
2) ವಿಭಾಗೀಯ ಅಧೀಕ್ಷಕರು,ಸಹ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು/ ಬೆಂಗಳೂರು/ಬೆಳಗಾಂ/ಗುಲ್ಬರ್ಗ ವಿಭಾಗ.
3) ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಸಂಗೀತ/ನೃತ್ಯ ವಿಭಾಗ, ಆಯುಕ್ತರ ಕಛೇರಿ, ಬೆಂಗಳೂರು.
4) ಪರೀಕ್ಷಾ ಕೇಂದ್ರದ ಶಾಲಾ/ಕಾಲೇಜಿನ ಮುಖ್ಯಸ್ಥರಿಗೆ.
5) ಕಛೇರಿ ಪ್ರತಿ.